ಕರ್ನಾಟಕ ವಿಧಾನ ಸಭೆ
KARNATAKA LEGISLATIVE ASSEMBLY

ಗುರುವಾರ, ದಿನಾಂಕ ೨೬ನೇ ಮಾರ್ಚಿ ೧೯೮೭, ಚೈತ್ರ ೫, ೧೯೦೯ ಶಕ

ಸದನವು ವಿಧಾನ ಸೌಧದಲ್ಲಿರುವ ವಿಧಾನ ಸಭೆಯ ಸಭಾಂಗಣದಲ್ಲಿ ಬೆಳಿಗ್ಗೆ ೮-೩೦ ಗಂಟೆಗೆ ಸಮಾವೇಶಗೊಂಡಿತು.

[ಅಧ್ಯಕ್ಷರು (ಶ್ರೀ ಬಿ. ಜಿ. ಬಣಕಾರ್) ಅವರು ಪೀಠವನ್ನಲಂಕರಿಸಿದರು.]

ವರದಿಯನ್ನೊಪ್ಪಿಸುವುದು

ಶ್ರೀ ಬಿ. ಜಿ. ಜವಳಿ.— ಮಾನ್ಯ ಅಧ್ಯಕ್ಷರೇ, ಕಂದಾಯ ಇಲಾಖೆಯ ಕಾರ್ಯನಿರ್ವಹಣೆಗೆ ಸಂಬಂಧಿಸಿದಂತೆ ಅಂದಾಜು ಸಮಿತಿಯ ಮೂರನೆಯ ವರದಿಯನ್ನು ಸಭೆಗೆ ಒಪ್ಪಿಸುತ್ತೇನೆ.

ಅಧ್ಯಕ್ಷರು.— ವರದಿಯನ್ನು ಒಪ್ಪಿಸಲಾಯಿತು.

ವಿತ್ತೀಯ ಕಾರ್ಯಕಲಾಪಗಳು

ಶ್ರೀ ಎಂ. ಮಲ್ಲಿಕಾರ್ಜುನ ಖರ್ಗೆ.— ಇಲ್ಲಿ ಮುಖ್ಯ ಮಂತ್ರಿಗಳೇ ಇಲ್ಲ, ಅವರದ್ದೇ ಡಿಮ್ಯಾಂಡ್ ಇದೆ.

ಶ್ರೀ ಎ. ಲಕ್ಷ್ಮೀಸಾಗರ್.— ನಾನು ಇದ್ದೇನೆ.

ಶ್ರೀ ಎಂ. ಮಲ್ಲಿಕಾರ್ಜುನ ಖರ್ಗೆ.— ನಿಮ್ಮನ್ನೇ ಮುಖ್ಯ ಮಂತ್ರಿಯನ್ನಾಗಿ ಮಾಡಿದ್ದರೆ ಸಂತೋಷ ಪಡುತ್ತಿದ್ದೆವು ಇಲ್ಲ.

ಅಧ್ಯಕ್ಷರು.— ಅವರು ಬರುತ್ತಾರೆ. ನೀವು ಮಾತನಾಡಿ.

† ಶ್ರೀ ಎಂ. ಮಲ್ಲಿಕಾರ್ಜುನ ಖರ್ಗೆ (ಗುರುಮಿಠಕಲ್) — ಸನ್ಮಾನ್ಯ ಅಧ್ಯಕ್ಷರೇ, ಇಂದಿನ ದಿವಸ ಮಾನ್ಯ ಮುಖ್ಯ ಮಂತ್ರಿಗಳು ಸುಮಾರು ೧೩ ಬೇಡಿಕೆಗಳನ್ನು ಮಂಡಿಸಿದ್ದಾರೆ. ಇದರಲ್ಲಿ ಯುವಜನ ಸೇವೆ, ಕಲೆ, ಸಂಸ್ಕೃತಿ ಮತ್ತು ಕನ್ನಡಾಭಿವೃದ್ಧಿ, ವರಮಾನ ಮತ್ತು ವೃತ್ತಿಗಳ ಮೇಲೆ ತೆರಿಗೆ ಪರಾರಾಟ ಮತ್ತು ಇತರ ಸೇವೆಗಳು, ವಿಮೆ ಪಿಜಾನೆ ಮತ್ತು ಲೇಖನ ಇಲಾಖೆಗಳ ಆಡಳಿತ, ವಿಶ್ರಾಂತಿ ವೇತನ ಮತ್ತು ಇತರ ನಿವೃತ್ತಿ ಸೌಲಭ್ಯಗಳು, ಸರ್ಕಾರಿ ನೌಕರರಿಗೆ ಸಾಲಗಳು ಮತ್ತು ವಿವಿಧ ಸಾಲಗಳು ವಿವಿಧ ಸಾಮಾನ್ಯ ಸೇವೆಗಳು, ವಾರ್ತಾ ಮತ್ತು ಪ್ರಚಾರ, ಚುನಾವಣೆಗಳು, ರಾಜ್ಯಪಾಲರು, ಮಂತ್ರಿಗಳು ಮತ್ತು ಲೋಕಸೇವಾ ಆಯೋಗ, ಸಚಿವಾಲಯ, ಜಿಲ್ಲಾಡಳಿತ, ಮುಖ್ಯ ಮಂತ್ರಿಯವರ ವಿವಿಧ ಅಭಿಯಾಚನೆ—ಹೀಗೆ ಸಂಬಂಧಿಸಿದಂತೆ ೧೩ ಡಿಮ್ಯಾಂಡ್ಸ್‌ಗಳನ್ನು ಮುಖ್ಯ ಮಂತ್ರಿಗಳು ನಮ್ಮ ಮುಂದಿಟ್ಟಿದ್ದಾರೆ. ಇದರಲ್ಲಿ ಕೆಲವು ಡಿಮ್ಯಾಂಡ್ಸ್ ಮೇಲೆ ಮಾತ್ರ ನಾನು ಮಾತನಾಡ ಬಯಸುತ್ತೇನೆ. ಮಾತನ್ನು ಅನಿವಾರ್ಯವಾಗಿ ಕೆಲವು ತೆಗೆದುಕೊಂಡಂತಹ ನಿರ್ಣಯಗಳು ಏನಿವೆ, ಅವುಗಳನ್ನು ಇಲ್ಲಿಯವರೆಗೂ ಅವರು ಆಚರಣೆಯಲ್ಲಿ ತಂದಿಲ್ಲ, ಇಂಪ್ಲಿಮೆಂಟ್ ಮಾಡಿಲ್ಲ. ವಿಶೇಷವಾಗಿ, ಮುಖ್ಯ ಮಂತ್ರಿಗಳಿಗೆ ನಾನು ಹೋದಸಲ ಹೈದರಾಬಾದ್ ಕರ್ನಾಟಕದ ಕಡೆ ಪ್ರವಾಸ ಬಂದಾಗ ಒಂದು ಮನವಿಯನ್ನು ಮಾಡಿಕೊಂಡಿದ್ದೆ. ಇಡೀ ರಾಜ್ಯದಲ್ಲಿ ಉತ್ತರ ಕರ್ನಾಟಕದಲ್ಲಿರ ತಕ್ಕಂಥ ಜಿಲ್ಲೆಗಳು ಅತಿ ದೊಡ್ಡ ಜಿಲ್ಲೆಗಳು ಇವೆ. ಆಡಳಿತದ ದೃಷ್ಟಿಯಿಂದ ಮತ್ತು ಆರ್ಥಿಕ